# ಕರ್ನಾಟಕ ವಿಧಾನ ಪ ರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1320** |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 17-12-2025 |

| ಪ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರೂಪ್ 'ಸಿ' ವೃಂದದಿಂದ ಮೋ.ವಾ.ನಿ. ಶೇ.5 ರಷ್ಟು ಹುದ್ದೆಗಳಿಗೆ ಬಡ್ತಿ ನೀಡಲು ಇರುವ ನಿಯಮಗಳು ಹಾಗೂ ಅಧಿಸೂಚನೆಯನ್ನು ಒದಗಿಸುವುದು; ಅಧಿಸೂಚನೆ ಹೊರಡಿಸಿದ ನಂತರದ ದಿನಾಂಕದಿಂದ ಸಾರಿಗೆ ಇಲಾಖೆಯಲ್ಲಿ ಡಿಪ್ಲೋಮಾ ಇನ್ ಆಟೋಮೊಬೈಲ್ ಪದವಿಯನ್ನು ಸಂಜೆ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವ್ಯಾಸಂಗ ಮಾಡಲು ಎಷ್ಟು ಗ್ರೂಪ್ 'ಸಿ' ಲಿಪಿಕ ಸಿಬ್ಬಂದಿಗಳು ಇಲಾಖೆ ಮುಖ್ಯಸ್ಥರಿಂದ ಎನ್.ಓ.ಸಿ ಪಡೆದಿದ್ದಾರೆ; ಹುದ್ದೆವಾರು, ಕಛೇರಿವಾರು ಪೂರ್ಣ ಮಾಹಿತಿ ನೀಡುವುದು; | ಗ್ರೂಪ್-ಸಿ ವೃಂದದಿಂದ ಮೋಟಾರು ವಾಹನ ನಿರೀಕ್ಷಕರ ಹುದ್ದೆಗೆ ಶೇ. 5% ರಷ್ಟು ಬಡ್ತಿ ನೀಡಲು ಅವಕಾಶ ನೀಡಿರುವ ಅಧಿಸೂಚನೆ ಸಂಖ್ಯೆ ಟಿಡಿ 40 ಟಿಡಿಎಸ್ 2021 (ಭಾಗ-1) ದಿನಾಂಕ: 12-10-2022 ರ ಪ್ರತಿಯನ್ನು **ಅನುಬಂಧ-1**ರಲ್ಲಿ ಒದಗಿಸಿದೆ.<br><br>ಸದರಿ ಅಧಿಸೂಚನೆ ಹೊರಡಿಸಿದ ನಂತರದ ದಿನಾಂಕದಿಂದ ಸಾರಿಗೆ ಇಲಾಖೆಯಲ್ಲಿ ಡಿಪ್ಲೊಮಾ ಆಟೋಮೊಬೈಲ್ ಪದವಿಯನ್ನು ಸಂಜೆ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವ್ಯಾಸಂಗ ಮಾಡಲು 56 ಗ್ರೂಪ್-ಸಿ ಲಿಪಿಕ ಸಿಬ್ಬಂದಿಗಳು ಇಲಾಖೆ ಮುಖ್ಯಸ್ಥರಿಂದ ಆಕ್ಷೇಪಣಾ ರಹಿತ ಪತ್ರ (ಎನ್.ಓ.ಸಿ.) ಪಡೆದಿದ್ದಾರೆ. ಸದರಿ ಆಕ್ಷೇಪಣಾ ರಹಿತ ಪತ್ರಗಳನ್ನು ಸುತ್ತೋಲೆ ಸಂಖ್ಯೆ: ಡಿಪಿಎಆರ್ 9 ಎಸ್‌ಆರ್‌ಸಿ 86, ದಿನಾಂಕ: 06-09-1986 ರನ್ವಯ ಲಿಪಿಕ ಸಿಬ್ಬಂದಿಯವರಿಗೆ ಹೆಚ್ಚಿನ ವ್ಯಾಸಂಗ ಪ್ರೋತ್ಸಾಹಿಸಲು ನೀಡಲಾಗಿದೆ. ಹುದ್ದೆವಾರು, ಕಛೇರಿವಾರು ಪೂರ್ಣ ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಿದೆ. |
| (ಆ) | ಕರ್ನಾಟಕ ಸರ್ಕಾರದ ನೌಕರಿ ಯಲ್ಲಿರುವ ಗ್ರೂಪ್ 'ಸಿ' ಲಿಪಿಕ ಸಿಬ್ಬಂದಿಗಳು ಸಂಜೆ ಪಾಲಿಟೆಕ್ನಿಕ್ ನಲ್ಲಿ ಡಿಪ್ಲೋಮಾ ಇನ್ ಆಟೋಮೊಬೈಲ್ ಪದವಿ ವ್ಯಾಸಂಗ ಮಾಡಲು ಇರುವ ಅಧಿಸೂಚನೆ/ ನಿಯಮಗಳನ್ನು ಒದಗಿಸುವುದು; | ಸರ್ಕಾರದ ಸುತ್ತೋಲೆ ಸಂಖ್ಯೆ: ಡಿಪಿಎಆರ್ 9 ಎಸ್‌ಆರ್‌ಸಿ 86, ದಿನಾಂಕ: 06-09-1986 ರನ್ವಯ ಲಿಪಿಕ ಸಿಬ್ಬಂದಿಯವರಿಗೆ ಹೆಚ್ಚಿನ ವ್ಯಾಸಂಗ ಪ್ರೋತ್ಸಾಹಿಸಲು ಅವಕಾಶ ನೀಡಲಾಗಿದೆ. ಪ್ರತಿಯನ್ನು **ಅನುಬಂಧ-3**ರಲ್ಲಿ ಒದಗಿಸಿದೆ. |
| (ಇ) | ಸಾರಿಗೆ ಇಲಾಖೆಯಲ್ಲಿ ಸುಮಾರು 50 ಗ್ರೂಪ್ 'ಸಿ' ಲಿಪಿಕ ಸಿಬ್ಬಂದಿಗಳು 2 ವರ್ಷದ ತಾಂತ್ರಿಕ ಶಿಕ್ಷಣ ಕ್ಷೇತ್ರದ ಸೇವಾನುಭವ ಪ್ರಮಾಣ ಪತ್ರ ನಕಲು ಮಾಡಿ ಸಂಜೆ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಬಗ್ಗೆ ಅನೇಕ ಪತ್ರಿಕೆ ಮಾಧ್ಯಮ, ದೃಶ್ಯ ಮಾಧ್ಯಮಗಳಲ್ಲಿ ಬಂದಿರುವ ವರದಿಗಳು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು. ಸರ್ಕಾರದ ಗಮನಕ್ಕೆ ಬಂದಿದೆ. |

| | | |
|---|---|---|
| (ಈ) | ಈ ಮೇಲಿನ ಅಕ್ರಮದ ಕುರಿತು ಯಾವುದಾದರೂ ಸಂಘ ಸಂಸ್ಥೆಗಳು/ಸಮಿತಿ/ಸಂಘಟನೆಗಳು ಸಾರಿಗೆ ಆಯುಕ್ತರು ಹಾಗೂ ತಾಂತ್ರಿಕ ಶಿಕ್ಷಣ ಆಯುಕ್ತರಿಗೆ ಲಿಖಿತ ದೂರಿನ ಮೂಲಕ ಸೂಕ್ತ ಕ್ರಮಕ್ಕಾಗಿ ಕೋರಲಾಗಿದೆಯೇ? | ಹೌದು, ಶ್ರೀ ಪಿ.ಎಲ್. ನೀಲನಾಯಕ, ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ.) (ಭೀಮವಾದ) ಇವರು ದಿನಾಂಕ:09.04.2025ರಂದು ದೂರು ಸಲ್ಲಿಸಿರುತ್ತಾರೆ. |
| (ಉ) | ಸರ್ಕಾರದ ಗಮನಕ್ಕೆ ಬಂದಿದ್ದರೆ, ಸಾರಿಗೆ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯು ಯಾವ ಕ್ರಮ ಕೈಗೊಳ್ಳಲಾಗಿದೆ: ವಿವರವಾಗಿ ಮಾಹಿತಿ/ ಸಮಿತಿಯ ವರದಿ ನೀಡುವುದು. | ಸಾರಿಗೆ ಇಲಾಖೆಯ ನೌಕರರು ನಕಲು ಸೇವಾನುಭವ ಪ್ರಮಾಣಪತ್ರ ಪಡೆದು ಸಂಜೆ ಪಾಲಿಟೆಕ್ನಿಕ್‌ನಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವುದಾಗಿ ಬಂದಿರುವ ದೂರಿನ ಕುರಿತು |
| (ಊ) | ಅಕ್ರಮ/ಕಾನೂನು ಬಾಹಿರವಾಗಿ ನಕಲು ಸೇವಾನುಭವ ಪ್ರಮಾಣ ಪತ್ರ ನೀಡಿ ಪ್ರವೇಶ ಪಡೆದ ಲಿಪಿಕ ಸಿಬ್ಬಂದಿಗಳು ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು, 2021ರ ನಿಯಮ 26, 28, 29 ಮತ್ತು 35ರ ಉಲ್ಲಂಘನೆ ಹಾಗೂ ವಿರುದ್ಧವಾಗಿರುವುದರಿಂದ ಸದರಿ ಸಿಬ್ಬಂದಿಗಳ ಮೇಲೆ ಸರ್ಕಾರ ಯಾವ ರೀತಿ ಶಿಸ್ತು ಕ್ರಮ ಜರುಗಿಸುವುದು? | ವರದಿ ಸಲ್ಲಿಸುವಂತೆ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರಿಂದ ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರನ್ನು ಕೋರಲಾಗಿತ್ತು. ಈ ಸಂಬಂಧ ತಾಂತ್ರಿಕ ಶಿಕ್ಷಣ ಇಲಾಖೆಯು ತನಿಖೆ ನಡೆಸಿ ವರದಿಯನ್ನು ದಿನಾಂಕ:12.09.2025ರ ಪತ್ರದ ಮೂಲಕ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರಿಗೆ ಸಲ್ಲಿಸಿ "ಅರೆಕಾಲಿಕ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಾತಿಗೆ 02 ವರ್ಷಗಳ ತಾಂತ್ರಿಕ ಸೇವಾನುಭವದೊಂದಿಗೆ ಸಂಬಂಧಪಟ್ಟ ತಾಂತ್ರಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರಬೇಕು. ದೂರಿನಲ್ಲಿ ನಮೂದಿಸಿದ 49 ಅಭ್ಯರ್ಥಿಗಳ ಪ್ರವೇಶದ ಸಂಪೂರ್ಣ ತನಿಖಾ ವರದಿಯನ್ನು ಲಗತ್ತಿಸಿ 02 ವರ್ಷದ ತಾಂತ್ರಿಕ ಸೇವಾನುಭವದ ನೈಜತೆಯನ್ನು ಪರಿಶೀಲಿಸಿ, ಸೂಕ್ತ ತೀರ್ಮಾನ ಕೈಗೊಳ್ಳುವಂತೆ" ತಿಳಿಸಿರುತ್ತಾರೆ.<br><br>ಈ ಸಂಬಂಧ, ಸಾರಿಗೆ ಆಯುಕ್ತರು ದಿನಾಂಕ:29.11.2025 ರ ಪತ್ರದಲ್ಲಿ, ಸಾರಿಗೆ ಇಲಾಖೆಯಿಂದ ತಾಂತ್ರಿಕ ಸೇವಾನುಭವದ ನೈಜತೆಯನ್ನು ಪರಿಶೀಲಿಸಲು ಅವಕಾಶವಿರುವುದಿಲ್ಲವಾದ್ದರಿಂದ ತಾಂತ್ರಿಕ ಶಿಕ್ಷಣ ಇಲಾಖೆಯಿಂದಲೇ ಪರಿಶೀಲಿಸಲು ಕೋರಲಾಗಿದೆ. ಮುಂದಿನ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ.<br><br>ಲಿಪಿಕ ಸಿಬ್ಬಂದಿಗಳು ಕಾನೂನು ಬಾಹಿರವಾಗಿ ನಕಲು ಸೇವಾನುಭವ ಪ್ರಮಾಣ ಪತ್ರ ಪಡೆದಿರುವುದು ರುಜುವಾತಾದಲ್ಲಿ ಅವರ ಮೇಲೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

**ಟಿಡಿ 96 ಟಿಡಿಕ್ಯೂ 2025**

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ ಸಚಿವರು**

ಅನುಬಂಧ -1


# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ ೪ಎ | ಬೆಂಗಳೂರು, ಬುಧವಾರ, ೧೨, ಅಕ್ಟೋಬರ್, ೨೦೨೨(ಆಶ್ವಯುಜ, ೨೦, ಶಕವರ್ಷ, ೧೯೪೪) | ಸಂ. ೫೧೦ |
| Part – IV A | BENGALURU, WEDNESDAY, 12, OCTOBER, 2022(AASHWAYUJA,20, SHAKAVARSHA, 1944) | No. 510 |


## GOVERNMENT OF KARNATAKA

No. SARIE 40 SAESE 2021 (P-1)

Karnataka Government Secretariat,
M.S. Building,
Bangalore, Dated:12-10-2022.

## NOTIFICATION

Whereas, the draft of Karnataka General Service (Motor Vehicles Branch) (Recruitment) (Amendment) Rules, 2022 was published as required by clause (a) of sub-section 2 of section 3 read with section 8 of Karnataka State Civil Services Act, 1978 (Karnataka Act 14 of 1990) in Notification No.: SARIE 40 SAESE 2021 (P-1), Bengaluru Dated:20-09-2022 in Part IVA vide No.: 469 of the Karnataka Gazette Extraordinary. Dated:20-09-2022 inviting objection and suggestions from persons likely to be affected within 15 days from the date of its publication in the Official Gazette.

Whereas, the said gazette was made available to public on 20-09-2022.

And whereas the objections and suggestions received in this behalf have been considered by the State Government.

Now, therefore in exercise the powers conferred by sub-section (1) of section 3 read with section 8 of The Karnataka State Civil Services Act, 1978 (Karnataka Act 14 of 1990) the Government of Karnataka hereby makes the following rules, namely:-

## RULES

**1. Title and Commencement:-** (1) These rules may be called the Karnataka General Service (Motor Vehicles Branch) (Recruitment) (Amendment) Rules, 2022.

(2) They shall come into force from the date of their final publication in the Official Gazette.

**2. Amendment to the Schedule.**- (i) In the Karnataka General Service (Motor Vehicles Branch) (Recruitment) Rules, 2021, in Schedule I,-

(i) In the entries relating to the category of post of " Regional Transport Officer" at Serial No:5, in column No.4 for the words, brackets and figures "Karnataka Civil Services (Direct recruitment through competitive exams and selection) (General) Rules, 2006 " the words, brackets and figures " the Karnataka Civil Services (Direct recruitment) (General) Rules, 2021 " shall be substituted.

(ii) In the entries relating to the category of post of "Inspector of Motor Vehicles" at serial No. 9, for the entries in column No. 4 and 5, the following shall be substituted, namely:-

| | |
|---|---|
| Ninety five percent by direct recruitment in accordance with the Karnataka Civil Services (Direct Recruitment) (General) Rules, 2021; and<br>Five Percent by promotion from the cadres of First Division Assistant, Stenographer, Senior Typist, Senior Drivers on the basis of **combined** seniority.<br>Provided that if no suitable person is available **for promotion** then by direct recruitment. | **For direct recruitment.-**<br>(1). Must have passed SSLC Examination or possess equivalent qualification ;<br>(2). Must possess a Diploma in Automobile Engineering or Mechanical Engineering of three years duration awarded by any institution recognized by the Central Government or State Government; or a degree in Automobile Engineering or Mechanical Engineering from an University established by law;<br>(3). Hold a Driving License authorizing to drive motor cycle with gear and light motor vehicles; and<br>(4). Must possess the following minimum physical standards namely:-<br>**(A) For men**<br>Height : 168 Cms<br>Chest girth: 86 Cms when fully expanded (minimum expansion must be 5 Cms.)<br>**(B)For Women**<br>(a) Height :157 Cms<br>(b) Weight :49 Kg |

**(c) For men and Women (Common standards)**

**(a) Vision:** Must have the following standard distant near vision with or without glasses.

| | Better | Worse |
|---|---|---|
| (i) Distant Vision | 6/9<br>6/9<br>or | 6/9<br>6/12 |
| (ii) Near Vision | 0/6 | 0/8 |

Each eye must have full field vision. Colour blindness, squint or any morbid conditions of the eyes or lids of either eye shall be disqualification.

**(b) Hearing**:

(i) Rinner's test

(ii) Webber's test

(iii) Tests for vertigo

Any defect observed during the test mentioned above shall be a disqualification.

(c) Anyone of the following shall also be physical disqualifications;

(i) Knock-knees

(ii) Bow legs

(iii) Flat feet

(iv) Varicose Veins

(d) Must be free from all congenital diseases and or deformities as certified by Medical Board constituted for this purpose.

**For Promotion.-**

(1) Must possess the educational qualification and physical standards as prescribed for direct recruitment.

| | |
|---|---|
| | (2) Must have put in a service of not less than eight years in Group-C cadres of which must have served at least three years in the cadre of First Division Assistant or Stenographer or Senior Typist or Senior Drivers and not less than three years from the date of acquiring educational qualification prescribed for direct recruitment.<br>**Provided that if an official who has put in a service of not less than three years in the cadre of First Division Assistant or Stenographer or Senior Typist or Senior Driver is not available then an official who has put in a service of not less than two years in the above cadres may be considered for promotion.**<br><br>(3) Must not have attained the age of fifty years at the time of promotion.<br><br>**Note:-** A person in the cadre of First Division Assistant or Stenographer or Senior Typist or Senior Driver shall exercise an irrevocable option either at the time of consideration of his promotion to the cadre of superintendent or Inspector of motor vehicles whichever is earlier. |

(iii) In the entries relating to the category of post of " Drivers" at Serial No:18, in column No.4 for the words, brackets and figures "Karnataka Civil Services (Direct recruitment through competitive exams and selection) (General) Rules, 2006 " the words, brackets and figures " the Karnataka Civil Services (Direct recruitment) (General) Rules, 2021" shall be substituted.

(iv) In the entries relating to the category of post of "Peon" at Serial No:21, in column No.4 for the words, brackets and figures "Karnataka Civil Services (Direct recruitment through competitive exams and selection) (General) Rules, 2006" the words, brackets and figures "the Karnataka Civil Services (Direct recruitment) (General) Rules, 2021" shall be substituted.

By order and in the name of the
Governor of Karnataka,

**(PUSHPA V.S)**
Under Secretary to Government,
Transport Department.

# ಅನುಬಂಧ-2

| ಕ್ರ. ಸಂ. | ಕಛೇರಿಯ ಹೆಸರು | ಹುದ್ದೆ | ಎನ್.ಒ.ಸಿ. ಪಡೆದಿರುವ ನೌಕರರ ಸಂಖ್ಯೆ |
|---|---|---|---|
| 1 | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | ಅಧೀಕ್ಷಕರು | 2 |
| | | ಪ್ರಥಮ ದರ್ಜೆ ಸಹಾಯಕರು | 9 |
| | | ಶೀಘ್ರಲಿಪಿಗಾರರು | 1 |
| | | ದ್ವಿತೀಯ ದರ್ಜೆ ಸಹಾಯಕರು | 1 |
| 2 | ಪ್ರಾದೇಶಿಕ ಸಾರಿಗೆ ಕಛೇರಿ, ಕೆ.ಆರ್. ಪುರಂ. | ಅಧೀಕ್ಷಕರು | 2 |
| | | ಪ್ರಥಮ ದರ್ಜೆ ಸಹಾಯಕರು | 3 |
| 3 | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ದಕ್ಷಿಣ) | ಅಧೀಕ್ಷಕರು | 1 |
| | | ಪ್ರಥಮ ದರ್ಜೆ ಸಹಾಯಕರು | 3 |
| | | ದ್ವಿತೀಯ ದರ್ಜೆ ಸಹಾಯಕರು | 1 |
| 4 | ಪ್ರಾದೇಶಿಕ ಸಾರಿಗೆ ಕಛೇರಿ, ಎಲೆಕ್ಟ್ರಾನಿಕ್‌ಸಿಟಿ | ಅಧೀಕ್ಷಕರು | 3 |
| | | ಪ್ರಥಮ ದರ್ಜೆ ಸಹಾಯಕರು | 1 |
| | | ಚಾಲಕರು | 1 |
| 5 | ಪ್ರಾದೇಶಿಕ ಸಾರಿಗೆ ಕಛೇರಿ, ಜ್ಞಾನಭಾರತಿ | ಪ್ರಥಮ ದರ್ಜೆ ಸಹಾಯಕರು | 1 |
| | | ದ್ವಿತೀಯ ದರ್ಜೆ ಸಹಾಯಕರು | 2 |
| 6 | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಪೂರ್ವ) | ಪ್ರಥಮ ದರ್ಜೆ ಸಹಾಯಕರು | 1 |
| | | ದ್ವಿತೀಯ ದರ್ಜೆ ಸಹಾಯಕರು | 1 |
| 7 | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಪಶ್ಚಿಮ) | ಅಧೀಕ್ಷಕರು | 1 |
| | | ಪ್ರಥಮ ದರ್ಜೆ ಸಹಾಯಕರು | 2 |
| | | ದ್ವಿತೀಯ ದರ್ಜೆ ಸಹಾಯಕರು | 1 |
| 8 | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಕೇಂದ್ರ) | ಅಧೀಕ್ಷಕರು | 1 |
| | | ಪ್ರಥಮ ದರ್ಜೆ ಸಹಾಯಕರು | 2 |
| 9 | ಪ್ರಾದೇಶಿಕ ಸಾರಿಗೆ ಕಛೇರಿ, ಮಂಡ್ಯ | ದ್ವಿತೀಯ ದರ್ಜೆ ಸಹಾಯಕರು | 1 |
| 10 | ಪ್ರಾದೇಶಿಕ ಸಾರಿಗೆ ಕಛೇರಿ, ಯಲಹಂಕ | ಪ್ರಥಮ ದರ್ಜೆ ಸಹಾಯಕರು | 3 |
| 11 | ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ, ನಾಗಮಂಗಲ | ಪ್ರಥಮ ದರ್ಜೆ ಸಹಾಯಕರು | 1 |
| 12 | ಪ್ರಾದೇಶಿಕ ಸಾರಿಗೆ ಕಛೇರಿ, ನೆಲಮಂಗಲ | ಪ್ರಥಮ ದರ್ಜೆ ಸಹಾಯಕರು | 1 |
| 13 | ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ, ದೇವನಹಳ್ಳಿ | ಪ್ರಥಮ ದರ್ಜೆ ಸಹಾಯಕರು | 1 |
| 14 | ಜಂಟಿ ಸಾರಿಗೆ ಆಯುಕ್ತರ ಕಛೇರಿ,ಮೈಸೂರು ವಿಭಾಗ. | ಪ್ರಥಮ ದರ್ಜೆ ಸಹಾಯಕರು | 1 |
| 15 | ಜಂಟಿ ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು (ಗ್ರಾಮಾಂತರ) ವಿಭಾಗ. | ಪ್ರಥಮ ದರ್ಜೆ ಸಹಾಯಕರು | 1 |
| 16 | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಉತ್ತರ) | ಪ್ರಥಮ ದರ್ಜೆ ಸಹಾಯಕರು | 2 |
| 17 | ಜಂಟಿ ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು (ನಗರ) ವಿಭಾಗ. | ಪ್ರಥಮ ದರ್ಜೆ ಸಹಾಯಕರು | 1 |
| 18 | ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ, ಬೆಂಗಳೂರು | ಪ್ರಥಮ ದರ್ಜೆ ಸಹಾಯಕರು | 1 |
| 19 | ಜಂಟಿ ಸಾರಿಗೆ ಆಯುಕ್ತರ ಕಛೇರಿ, ಕಲಬುರಗಿ ವಿಭಾಗ. | ಪ್ರಥಮ ದರ್ಜೆ ಸಹಾಯಕರು | 1 |
| 20 | ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಕಛೇರಿ, ಕಲಬುರಗಿ | ಪ್ರಥಮ ದರ್ಜೆ ಸಹಾಯಕರು | 1 |
| 21 | ಪ್ರಾದೇಶಿಕ ಸಾರಿಗೆ ಕಛೇರಿ, ತುಮಕೂರು | ಚಾಲಕರು | 1 |
| **ಒಟ್ಟು** | | | **56** |

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಪಿಎಆರ್ 9 ಎಸ್‌ಆರ್‌ಸಿ 86

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 6ನೇ ನವೆಂಬರ 1986.

## ಸುತ್ತೋಲೆ

ವಿಷಯ: ಸರಕಾರಿ ನೌಕರರು ತಾಂತ್ರಿಕ ಮತ್ತು ಶೈಕ್ಷಣಿಕ ವಿದ್ಯಾರ್ಹತೆ ಪಡೆಯಲು ಪ್ರೋತ್ಸಾಹ ಕೊಡುವ ಬಗ್ಗೆ.

ಉಲ್ಲೇಖ: ಸರಕಾರಿ ಆದೇಶ ಸಂಖ್ಯೆ. ಜಿಎಡಿ 4 ಎಸ್‌ಆರ್‌ಸಿ 73 ದಿನಾಂಕ 5-2-73.

---

ಕಚೇರಿ ಕೆಲಸಕ್ಕೆ ಅಡ್ಡಿ ಬಾರದಂತೆ ಸರಕಾರಿ ನೌಕರರು ಉನ್ನತ ಶಿಕ್ಷಣ ಪಡೆಯಲು ಯಾವ ಷರತ್ತುಗಳಿಗೊಳಪಟ್ಟು ಅವರಿಗೆ ಅನುಮತಿ ನೀಡಬೇಕೆಂಬುದನ್ನು ಆದೇಶ ಸಂಖ್ಯೆ. ಜಿಎಡಿ 4 ಎಸ್‌ಆರ್‌ಸಿ 73 ದಿನಾಂಕ 5-2-73ರಲ್ಲಿ ಸ್ಪಷ್ಟೀಕರಿಸಲಾಗಿದೆ. ಸರಕಾರಿ ನೌಕರರ ಮನೋಬಲ ಕುಗ್ಗುವುದನ್ನು ತಡೆಗಟ್ಟುವುದಕ್ಕಾಗಿ ಮತ್ತು ಆಡಳಿತದ ಚುರುಕುತನ ತಗ್ಗುವುದನ್ನು ತಪ್ಪಿಸುವುದಕ್ಕಾಗಿ ನೌಕರರ ಸೇವಾ ಷರತ್ತುಗಳಿಗೆ ಅನ್ವಯಿಸುವ ವಿಷಯಗಳಲ್ಲಿ ವಿಳಂಬ ಮಾಡದೆ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಅಧಿಕೃತ ಜ್ಞಾಪನ ಸಂಖ್ಯೆ. ಡಿಪಿಎಆರ್ 19 ಎಸ್‌ಡಿಎಸ್‌ಆರ್ 85 ದಿನಾಂಕ 11-6-85ರಲ್ಲಿ ಒತ್ತಿಹೇಳಲಾಗಿದೆ.

1985ರ ಅಧಿಕಾರ ವೇತನ ಸಮಿತಿಯು ನೌಕರರ ಹಿತಾಸಕ್ತಿಯಿಂದ ಮಾಡಿರುವ ಸೂಚನೆಗಳಲ್ಲಿ ಈ ಕೆಳಗಿನ ಸೂಚನೆಗಳು ಅಡಕಗೊಂಡಿವೆ --

"Employees in Group 'C' and 'D' may be encouraged to improve their educational and technical qualifications by undertaking requisite training courses after office hours. Such of the employees who add to their qualifications may be allowed to compete, with relaxed age limit along with outsiders for higher posts."

ಈಗಾಗಲೇ ತಾತ್ಕಾಲಿಕ ಸರಕಾರಿ ನೌಕರಿಯಲ್ಲಿರುವವರಿಗೆ ಉನ್ನತ ದರ್ಜೆ ಹುದ್ದೆಗಳ-ನೇರ ನೇಮಕಾತಿಯಲ್ಲಿ ಸ್ಪರ್ಧಿಸಲು ಅನುಕೂಲವಾಗುವಂತೆ ಗರಿಷ್ಟ ವಯೋಮಿತಿಯಲ್ಲಿ 10 ವರ್ಷಗಳ ರಿಯಾಯಿತಿಯನ್ನು ಕರ್ನಾಟಕ ಸರಕಾರಿ ಸಾಮಾನ್ಯ ನೇಮಕಾತಿ ನಿಯಮಗಳಲ್ಲಿ ಕಲ್ಪಿಸಲಾಗಿದೆ. ತಾಂತ್ರಿಕ ಮತ್ತು ಶೈಕ್ಷಣಿಕ ವಿದ್ಯಾರ್ಹತೆ ಪಡೆಯಲು ಸರಕಾರಿ ನೌಕರರಿಗೆ ಪ್ರೋತ್ಸಾಹ ಕೊಡುವ ಬಗ್ಗೆ ಸರಕಾರದ ಎಲ್ಲಾ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರು ಅಧಿಕಾರಿ ವೇತನ ಸಮಿತಿಯ ಶಿಫಾರಸ್ಸನ್ನು ಗಮನದಲ್ಲಿಟ್ಟು ನಿಯಮಗಳಲ್ಲಿ ಅವಶ್ಯಕವಿದ್ದಲ್ಲಿ ಅಂತಹ ಇಲಾಖೆಗಳಿಗೆ ಅನ್ವಯಿಸುವ ನಿಯಮಗಳನ್ನು ಸೂಕ್ತ ತಿದ್ದುಪಡಿ ಮಾಡುವ ಮೂಲಕ ಉಚ್ಚ ವ್ಯಾಸಂಗ ಪಡೆಯ ಬಯಸುವ ನೌಕರರಿಗೆ ಸಾಕಷ್ಟು ಪ್ರೋತ್ಸಾಹ ನೀಡಬೇಕೆಂದು ಈ ಮೂಲಕ ಸೂಚಿಸಿದೆ.

ಮುಂದುವರಿದಿದೆ......2.

ಈ ಸೂಚನೆಗಳನ್ನು ಸರಕಾರದ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರುಗಳು ಸೂಕ್ತ ಕ್ರಮಕ್ಕಾಗಿ ತಮ್ಮ ಅಧೀನ ಅಧಿಕಾರಿಗಳ ಗಮನಕ್ಕೆ ತರುವುದು.

(ಜಿ.ಕೆ.ಸಂಗೋರಾಮ್)
ಸರಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು).

ಸರಕಾರದ ಎಲ್ಲಾ ಕಾರ್ಯದರ್ಶಿಗಳು.
ಸರಕಾರದ ಎಲ್ಲಾ ಇಲಾಖಾ ಮುಖ್ಯಸ್ಥರು.

ಎಸ್. 861006